Office of the Senior Deputy Director
Local Audit Circle,
Room No-SA-1, 2nd floor,
Zilladalita Bhavana,
Chikkaballapura-562101
Phone No-08156 277033
Email: aclacchikkaballapura@gmail.com

ಕರ್ನಾಟಕ ಸರ್ಕಾರ
(ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ)

ಹಿರಿಯ ಉಪ ನಿರ್ದೇಶಕರವರ ಕಛೇರಿ,
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ,
ಕೊಠಡಿ ಸಂಖ್ಯೆ-SA-1, 2ನೇ ಮಹಡಿ,
ಜಿಲ್ಲಾಡಳಿತ ಭವನ,
ಚಿಕ್ಕಬಳ್ಳಾಪುರ-562101
ದೂರವಾಣಿ ಸಂಖ್ಯೆ-08156 277033
ಇ-ಮೇಲ್: aclacchikkaballapura@gmail.com

ಸಂಖ್ಯೆ:ಹಿಉನಿ/ಸ್ಥಲೆಪವ/ಚಿಪು/20-21/31-32

ದಿನಾಂಕ:- 30/09/2020

ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ
ಸಂಖ್ಯೆ 583
ದಿನಾಂಕ 3.2.2021
ಚಿಕ್ಕಬಳ್ಳಾಪುರ

ಇವರಿಗೆ,

ಆಯುಕ್ತರು,
ನಗರಾಭಿವೃದ್ಧಿಪ್ರಾಧಿಕಾರ,
ಚಿಕ್ಕಬಳ್ಳಾಪುರ.

ಮಾನ್ಯರೇ,

ವಿಷಯ:- ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ 2018-19 ರ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ರವಾನಿಸುತ್ತಿರುವ ಬಗ್ಗೆ.

* * * * *

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 48(2) ರಂತೆ ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರದ 2018-19 ರ ಸಾಲಿನ ಲೆಕ್ಕ ಪರಿಶೋಧನೆ ಕೈಗೊಂಡು ಲೆಕ್ಕಪರಿಶೋಧನಾ ವರದಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮಗೆ ರವಾನಿಸಿದೆ.

ಲೆಕ್ಕ ಪರಿಶೋಧನೆಯಲ್ಲಿ ಗಮನಿಸಲಾದ ನ್ಯೂನತೆಗಳನ್ನು ಲೆಕ್ಕ ಪರಿಶೋಧನಾ ವರದಿಯಲ್ಲಿ ಪ್ರಸ್ತಾಪಿಸಲಾಗಿದೆ ಹಾಗೂ ಪ್ರಾಧಿಕಾರವು ಸ್ವಂತ ಆರ್ಥಿಕ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ನಿಟ್ಟಿನಲ್ಲಿ ಹಲವು ಸಲಹೆ ಹಾಗೂ ಸೂಚನೆಗಳನ್ನು ನೀಡಲಾಗಿದೆ. ಪ್ರಾಧಿಕಾರ ಆಡಳಿತ ಸದರಿ ವರ್ಗದ ನ್ಯೂನತೆಗಳನ್ನು ಸರಿಪಡಿಸಲು ಕ್ರಮ ಕೈಗೊಂಡು ಅದರ ಬಗ್ಗೆ ಅನುಸರಣಾ ವರದಿಯನ್ನು ಕಾಯ್ದೆಯ ಕಲಂ 48(6) ರಂತೆ ಸಕ್ಷಮ ಪ್ರಾಧಿಕಾರದ ಮುಖೇನ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ ಕಛೇರಿಗೆ ಕಳುಹಿಸಲು ಕೋರಿದೆ.

ಲೆಕ್ಕಪರಿಶೋಧನಾ ವರದಿ ತಲುಪಿದ ಬಗ್ಗೆ ಸ್ವೀಕೃತಿ ಕೋರಿದೆ.

3/2/21

ತಮ್ಮ ವಿಶ್ವಾಸಿ,

ಹಿರಿಯ ಉಪ ನಿರ್ದೇಶಕರು,
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ,
ಚಿಕ್ಕಬಳ್ಳಾಪುರ.

ಪ್ರತಿಯನ್ನು :

1. ನಿರ್ದೇಶಕರು, ನಗರ ಯೋಜನಾ ಪ್ರಾಧಿಕಾರ, ಎಮ್.ಎಸ್.ಬಿಲ್ಡಿಂಗ್ ಕೆ.ಆರ್.ವೃತ್ತ, ಬೆಂಗಳೂರು-01 ಇವರ ಅವಗಾಹನೆಗೆ ಸಲ್ಲಿಸಲಾಗಿದೆ.
2. ಮಾನ್ಯ ಅಪರ ನಿರ್ದೇಶಕರು, ಬೆಂಗಳೂರು ಪ್ರಾಂತೀಯ ಕಚೇರಿ, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ & ಲೆಕ್ಕಪತ್ರ ಇಲಾಖೆ, 4ನೇ ಮಹಡಿ, 'ಎ'ಬ್ಲಾಕ್, ಟಿ.ಟಿ.ಎಂ.ಸಿ ಕಟ್ಟಡ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560027.
3. ಕಚೇರಿ ಪ್ರತಿ.

Scanned with OKEN Scanner

ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ ಸಂಸ್ಥೆಯ 2018–19ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಪ್ರಸ್ತಾಪಿಸಲಾದ ಪ್ರಮುಖವಾದ ನ್ಯೂನತೆಗಳು ಹಾಗೂ ಆಕ್ಷೇಪಣೆಯಲ್ಲಿಡಲಾದ ಮತ್ತು ವಸೂಲಾತಿಗೆ ಸೂಚಿಸಿದ ಮೊತ್ತಗಳ ವಿವರ.

ಕಂಡಿಕೆ	ಪ್ರಮುಖವಾದ ನ್ಯೂನತೆಗಳು	ಆಕ್ಷೇಪಣೆ ಮೊತ್ತ	ವಸೂಲಾತಿ ಮೊತ್ತ
5	ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಗಳಿಗೆ ಅನುಸರಣಾ ವರದಿ ಸಲ್ಲಿಸದಿರುವುದು.	–	–
8	ಖಾಸಗಿ ಮುದ್ರಣಾಲಯದಿಂದ ಮುದ್ರಿಸಿರುವ ರಸೀದಿ ಪುಸ್ತಕಗಳನ್ನು ಉಪಯೋಗಿಸುತ್ತಿರುವ ಬಗ್ಗೆ.	–	–
9	ರಸೀದಿ ಪುಸ್ತಕಗಳಲ್ಲಿನ ನ್ಯೂನತೆಗಳು .	–	–
10	ಆಯವ್ಯಯ ತಯಾರಿಸಿದೆ ವೆಚ್ಚ ಭರಿಸಿರುವುದು.	–	–
11	ವಾರ್ಷಿಕ ಲೆಕ್ಕ ಪತ್ರಗಳ ಕುರಿತು.	–	–
19	ಉತ್ತಮತೆ ಶುಲ್ಕದ ದರಗಳನ್ನು ಪರಿಷ್ಕರಿಸದಿರುವುದರಿಂದ ಪ್ರಾಧಿಕಾರಕ್ಕೆ ಆದಾಯ ತಪ್ಪಿ ನಷ್ಟವಾಗಿರುವುದು.	114363511	–
20	ನಗರ ಯೋಜನಾ ಮಂಡಳಿಗೆ ವಂತಿಕೆ ಪಾವತಿಸದಿರುವುದು.	–	–
23	ಪ್ರಾಧಿಕಾರದ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದ ಪಾವತಿ ತಃಖ್ತೆಯನ್ನು ಸರ್ಕಾರದ ಮಂಜೂರಾತಿಗೆ ಸಲ್ಲಿಸಿ ಅನುಮೋದನೆ ಪಡೆದಿಲ್ಲ.	794515	–
24	ಲೆಕ್ಕಪರಿಶೋಧನಾ ಶುಲ್ಕವನ್ನು ಪಾವತಿಸದಿರುವುದು.	–	–
	ಒಟ್ಟು	**115158026**	–

ಹಿರಿಯ ಉಪನಿರ್ದೇಶಕರು,
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ,
ಚಿಕ್ಕಬಳ್ಳಾಪುರ.

Scanned with OKEN Scanner

ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ ಸಂಸ್ಥೆಯ 2018–19ನೇ ಸಾಲಿನ ಲೆಕ್ಕಪರಿಶೋಧನಾ ವರದಿ

ಭಾಗ–1

1) ಪ್ರಸ್ತಾವನೆ :

ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯಿದೆ 1961 ರ ಸೆಕ್ಷನ್ 68 ಸಿ (2) ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಾವಳಿಗಳು 1965 ರ ನಿಯಮ 23(1) ರಂತೆ ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರದ 2018–19ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲಾಗಿದೆ. ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಪ್ರಮುಖವಾದ ನ್ಯೂನತೆಗಳನ್ನು ಹಾಗೂ ಲೋಪದೋಷಗಳನ್ನು ಮುಂದಿನ ಕಂಡಿಕೆಗಳಲ್ಲಿ ಪ್ರಸ್ತಾಪಿಸಲಾಗಿದೆ. ಪ್ರಾಧಿಕಾರದ ಆಡಳಿತ ವರ್ಗ ಸದರಿ ನ್ಯೂನತೆಗಳನ್ನು ಸರಿಪಡಿಸಲು ಕ್ರಮ ಕೈಗೊಂಡು ಅದರ ಅನುಸರಣಾ ವರದಿಯನ್ನು ಸೆಕ್ಷನ್ 48(6) ರಂತೆ ಕಳುಹಿಸಲು ಸೂಚಿಸಿದೆ.

2) ಲೆಕ್ಕಪರಿಶೋಧನೆ ಕೈಗೊಂಡ ಬಗ್ಗೆ ವಿವರಗಳು :

ಲೆಕ್ಕಪರಿಶೋಧನಾ ಸಂಸ್ಥೆಯ ಹೆಸರು	ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ
ಲೆಕ್ಕಪರಿಶೋಧನಾ ಅವಧಿ	2018–19
ಲೆಕ್ಕಪರಿಶೋಧನಾ ತಂಡದ ವಿವರ	ಶ್ರೀ.ಈ.ಚಿಕ್ಕೇರಪ್ಪ, ಲೆ.ಪ.ಅ ಶ್ರೀ.ಎ.ಶ್ರೀಧರ, ಲೆ.ಪ ಶ್ರೀಮತಿ.ಬಿ.ಭಾಗ್ಯಮ್ಮ, ಲೆ.ಪ ಶ್ರೀ.ಎಂ.ಮಧು, ಲೆ.ಪ
ಲೆಕ್ಕಪರಿಶೋಧನೆ ಪ್ರಾರಂಭಿಸಿದ ದಿನಾಂಕ	16–5–2019
ಲೆಕ್ಕಪರಿಶೋಧನೆ ಮುಕ್ತಾಯದ ದಿನಾಂಕ	22–5–2019
ಲೆಕ್ಕಪರಿಶೋಧನೆ ಬಳಸಿಕೊಂಡ ಮಾನವ ದಿನಗಳು	24 ಮಾನವ ದಿನಗಳು
ಕರಡು ತನಿಖಾ ವರದಿಯ ಪುನರ್ ಪರಿಶೀಲನಾಧಿಕಾರಿ ಹೆಸರು	ಶ್ರೀ ಕುಪ್ಪೂರ ಲಿಂಗಯ್ಯ ಅಪರ ನಿರ್ದೇಶಕರು,
ಪುನರ್ ಪರಿಶೀಲನಾ ದಿನಾಂಕ	21.09.2020

3) ಸಂಸ್ಥೆಯ ಆಡಳಿತ ವರ್ಗದ ವಿವರ :

1	ಆಯುಕ್ತರು	ಶ್ರೀ ಪ್ರಜ್ಞಾ ಅಮ್ಮೆಂಬಳ KAS	01.4.2018	31.3.2019
2	ನಗರ ಯೋಜನ ಸದಸ್ಯರು	ಶ್ರೀ ಕೃಷ್ಣಪ್ಪ H.R.	01.4.2018	31.3.2019
3	ನಗರ ಯೋಜಕರು	ಶ್ರೀ ಜೆ.ಕುಮಾರ್	01.4.2018	31.3.2019
4	ಬೆರಳಚ್ಚುಗಾರರು	ಶ್ರೀ.ಅನಿಲ್ P.N.	01.4.2018	31.3.2019
		ಶ್ರೀಮತಿ, ಭಾರತಿ.M.	01.4.2018	31.3.2019
		ಶ್ರೀ. ಪಿರ್ದೊಸ್	01.4.2018	31.3.2019
5	D.Group	ಶ್ರೀ.ಪ್ರಭಾಕರ್.T.N	01.4.2018	31.3.2019
		ಶ್ರೀ.ನರಸಿಂಹಮೂರ್ತಿ.S.K	01.4.2018	31.3.2019

4) ಪ್ರಾಧಿಕಾರದ ರಚನೆ ಬಗ್ಗೆ :

ಸರ್ಕಾರದ ಅಧಿಸೂಚನರ ಸಂಖ್ಯೆ:ನ:ಅ:ಇ 336/ಬೆಂ.ರಾ.ಪ್ರಾ.2014 ದಿನಾಂಕ:–09.2.15 ಅಧಿಸೂಚನೆ ಅನ್ವಯ ಚಿಕ್ಕಬಳ್ಳಾಪುರ ಯೋಜನಾ ಪ್ರಾಧಿಕಾರದ ಯೋಜನಾ ಪ್ರದೇಶವನ್ನು ಕರ್ನಾಟಕ ನಗರಾಭಿವೃದ್ಧಿ ಕಾಯ್ದೆ 1987 ರ, ಕಲಂ 3(1) ರನ್ವಯ ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರವೆಂದು ಘೋಷಿಸಲಾಗಿದೆ. ಪ್ರಾಧಿಕಾರದ ವ್ಯಾಪ್ತಿಗೆ ಒಳಪಡುವ ಗ್ರಾಮ ಮತ್ತು ಸರ್ವೇನಂ ವಿವರ ಅನುಬಂಧ–1 ಮತ್ತು 2 ರಲ್ಲಿ ನೀಡಲಾಗಿದೆ.

5) ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಗಳಿಗೆ ಅನುಸರಣಾ ವರದಿ ಸಲ್ಲಿಸದಿರುವುದು :

ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರದ 2018–19 ರ ಸಾಲುಗಳ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳ ವಿವರಗಳು ಈ ಕೆಳಕಂಡಂತಿದ್ದು, ಕರ್ನಾಟಕ ಯೋಜನಾ ಪ್ರಾಧಿಕಾರದ ನಿಯಮಾವಳಿಗಳು 1965 ರ ನಿಯಮ 27 ರಂತೆ ಅನುಸರಣಾ ವರದಿಗಳನ್ನು ತಯಾರಿಸಿ ಅವುಗಳನ್ನು ಆಡಿಟ್ ಮಿನಿಟ್ ಪುಸ್ತಕದಲ್ಲಿ ದಾಖಲಿಸಿ ಸಕ್ಷಮ ಪ್ರಾಧಿಕಾರದ ಮೂಲಕ ಹಿರಿಯ ಉಪ ನಿರ್ದೇಶಕರು, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ, ಚಿಕ್ಕಬಳ್ಳಾಪುರ ಇಲ್ಲಿಗೆ ಕಳುಹಿಸಿಕೊಡುವುದು. ತೀರುವಳಿಯಾಗದೆ ಬಾಕಿ ಉಳಿದಿರುವ ಆಕ್ಷೇಪಣೆ ಮತ್ತು ವಸೂಲಾತಿ ಮೊತ್ತಗಳ ವಿವರ ಈ ಕೆಳಕಂಡಂತಿದೆ.

Scanned with OKEN Scanner

ವಿವರ	ಆಕ್ಷೇಪಣೆ		ವಸೂಲಾತಿ	
	ಕಂಡಿಕೆ	ಮೊತ್ತ	ಕಂಡಿಕೆ	ಮೊತ್ತ
1-4-2018 ರ ಪ್ರಾರಂಭಿಕ ಶಿಲ್ಕು	10	1837946802	09	43739659
2018-19 ರಲ್ಲಿ ಸೇರ್ಪಡೆ	02	115158026	–	–
ಒಟ್ಟು	12	1953104828	09	43739659
2018-19 ರಲ್ಲಿ ತೀರುವಳಿ	–	–	–	–
31-3-2019 ರ ಅಂತಿಮ ಶಿಲ್ಕು	12	1953104828	09	43739659

ಭಾಗ-2

ಪ್ರಸಕ್ತ ಲೆಕ್ಕಪರಿಶೋಧನೆ

6) ಪ್ರಸಕ್ತ ಲೆಕ್ಕಪರಿಶೋಧನೆ :

(1) ನಗದು ಶಿಲ್ಕು ಭೌತಿಕ ಪರಿಶೀಲನೆ :

ದಿನಾಂಕ:16-05-2019 ರಂದು (Handcash) ಕೈ ನಗದು ಶಿಲ್ಕನ್ನು ಭೌತಿಕವಾಗಿ ಪರಿಶೀಲಿಸಲಾಗಿ " ಯಾವುದೇ ಶಿಲ್ಕು" ಇರುವುದಿಲ್ಲ. ಕಛೇರಿ ನಗದು ಪುಸ್ತಕಕ್ಕೆ ತಾಳೆ ಇರುತ್ತದೆ.

(2) ಅಂಚೆ ಚೀಟಿಗಳ ಭೌತಿಕ ಪರಿಶೀಲನೆ :

ಅಂಚೆ ಚೀಟಿಗಳ ದಾಸ್ತಾನನ್ನು ಭೌತಿಕವಾಗಿ ಪರಿಶೀಲಿಸಲಾಗಿ " ಯಾವುದೇ ಶಿಲ್ಕು" ಇರುವುದಿಲ್ಲ.

(3) ಉಪಯೋಗಿಸದ ರಶೀದಿ ಪುಸ್ತಕಗಳ ಭೌತಿಕ ಪರಿಶೀಲನೆ :

ದಿನಾಂಕ:16-05-2019 ರಂದು ಉಪಯೋಗಿಸದ ದಾಸ್ತಾನು ವಿತರಣೆ ವಹಿಗೆ ತಾಳೆ ಇರುತ್ತದೆ.

(4) ಹೂಡಿಕೆಗಳು :

ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಬಳ್ಳಾಪುರ ಸಂಸ್ಥೆಯಲ್ಲಿ ಡಿಪಾಸಿಟ್ ಗಳ ಹೂಡಿಕೆ ವಿವರ ಈ ಕೆಳಕಂಡಂತಿದೆ.

	ಕ್ರ ಸಂ.	ಬ್ಯಾಂಕ್ ವಿವರ	ಬಾಂಡ್ ಸಂಖ್ಯೆ / ಖಾತೆ ಸಂಖ್ಯೆ	ಪ್ರಿನ್ಸಿಪಲ್ ಬಾಂಡ್ ಮೊತ್ತ ದಿನಾಂಕ	ಪರಿಪಕ್ವ ಬಾಂಡ್ ದಿನಾಂಕ	ಬಡ್ಡಿ ಶೇ.ಧರ
I	1	ಕರ್ನಾಟಕ ಬ್ಯಾಂಕ್ ಚಿಕ್ಕಬಳ್ಳಾಪುರ	0924910 A/C 119601	ರೂ.10000000-00 ದಿ:-04.02.19	ರೂ.10770601-00 ದಿ:-04.02.20 1 ವರ್ಷ	7.50
	2	ಕರ್ನಾಟಕ ಬ್ಯಾಂಕ್ ಚಿಕ್ಕಬಳ್ಳಾಪುರ	0924911 A/C 119801	ರೂ.8650000-00 ದಿ:-05.02.19	ರೂ.9316579-00 ದಿ:-05.02.20 1 ವರ್ಷ	7.50
	3	ಕರ್ನಾಟಕ ಬ್ಯಾಂಕ್ ಚಿಕ್ಕಬಳ್ಳಾಪುರ	0924909 A/C 119501	ರೂ.10000000-00 ದಿ:-04.02.19	ರೂ.10770601-00 ದಿ:-04.02.20 1 ವರ್ಷ	7.50
	4	ಕರ್ನಾಟಕ ಬ್ಯಾಂಕ್ ಚಿಕ್ಕಬಳ್ಳಾಪುರ	0924908 A/C 119401	ರೂ.10000000-00 ದಿ:-04.02.19	ರೂ.1077060-00 ದಿ:-04.02.20 1 ವರ್ಷ	7.50 7.50
	5	ಕರ್ನಾಟಕ ಬ್ಯಾಂಕ್ ಚಿಕ್ಕಬಳ್ಳಾಪುರ	0924736 A/C 114701	ರೂ.32500000-00 ದಿ:-15.11.18	ರೂ.34972566-00 ದಿ:-15.11.19 1 ವರ್ಷ	7.50
	6	ಕರ್ನಾಟಕ ಬ್ಯಾಂಕ್ ಚಿಕ್ಕಬಳ್ಳಾಪುರ	0924735 A/C 114601	ರೂ.7600000-00 ದಿ:-15.11.18	ರೂ.8178200-00 ದಿ:-15.11.19 1 ವರ್ಷ	7.50
II	1	ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ	37658070512	ರೂ.10000000-00 ದಿ:-19.04.18	ರೂ.10718590-00 ದಿ:-19.04.19 1 ವರ್ಷ	7.00
	2	ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ	37740170443	ರೂ.20000000-00 ದಿ:-6.6.18	ರೂ.21437181-00 ದಿ:-6.6.19 1 ವರ್ಷ	7.00
	3	ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ	64191586644	ರೂ.6059726-00 ದಿ:-23.2.19	ರೂ.6482415-00 ದಿ:-23.2.20 1 ವರ್ಷ	6.8
	4	ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ	64191586826	ರೂ.6059725-00 ದಿ:-23.2.19	ರೂ.6482415-00 ದಿ:-23.2.20 1 ವರ್ಷ	6.8
	5	ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ	64191687751	ರೂ.2181500-00 ದಿ:-23.2.19	ರೂ.2333666-00 ದಿ:-23.2.20 1 ವರ್ಷ	6.8
	6	ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ	64191586815	ರೂ.6059726-00 ದಿ:-23.2.19	ರೂ.6482415-00 ದಿ:-23.2.20 1 ವರ್ಷ	6.8
	7	ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ	6419158426	ರೂ.6059726-00 ದಿ:-23.2.19	ರೂ.6482415-00 ದಿ:-23.2.20 1 ವರ್ಷ	6.8

Scanned with OKEN Scanner

) ರಸೀದಿ ಪುಸ್ತಕಗಳ ದಾಸ್ತಾನು ವಿವರ :

2018–19 ನೇ ಸಾಲಿನ ಪ್ರಾಧಿಕಾರದ ರಸೀದಿ ಪುಸ್ತಕಗಳ ದಾಸ್ತಾನು ವಿವರ ಪರಿಶೀಲಿಸಲಾಯಿತು. ರಸೀದಿ ಪುಸ್ತಕಗಳ ದಾಸ್ತಾನು ವಹಿಯನ್ನು ನಿರ್ವಹಿಸಿರುವುದಿಲ್ಲ. ವಹಿಯನ್ನು ನಿರ್ವಹಿಸಿ, ರಸೀದಿ ಪುಸ್ತಕಗಳ ಸ್ವೀಕೃತಿ, ವಿತರಣೆಯನ್ನು ದಾಖಲಿಸುವಂತೆ ಪರದಿ ಸೂಚಿಸಿದೆ. ಪ್ರಸ್ತಕ ಸಾಲಿನ ಭೌತಿಕ ಪರಿಶೀಲನೆ ವೇಳೆಯಲ್ಲಿ ಕಂಡು ಬಂದ ರಸೀದಿ ಪುಸ್ತಕಗಳ ಸ್ವೀಕೃತಿ ವಿತರಣೆ ಹಾಗೂ ಅಂತಿಮ ಶಿಲ್ಕಿನ ವಿವರಗಳು ಕೆಳಕಂಡಂತೆ ಇವೆ.

01–04–2018 ಕ್ಕೆ ಪ್ರಾರಂಭಿಕ ಶಿಲ್ಕು	76	(23 to 60, 13 to 52)
2018–19 ರ ಸಾಲಿನ ವಿರೀದಿ	–	
ಒಟ್ಟು ಪುಸ್ತಕಗಳು	76	
2018–19 ರ ಸಾಲಿನ ವಿತರಣೆಗಳು	8	(13 to 18, 23 to 24)
31–03–2019 ಕ್ಕೆ ಅಂತಿಮ ಶಿಲ್ಕು	68	(25 to 60, 19 to 52)

ಲೆಕ್ಕಪರಿಶೋಧನೆಯಲ್ಲಿ ಭಾಗಶ: ಪರಿಶೀಲಿಸಿದ ರಸೀದಿ ಪುಸ್ತಕಗಳು ಈ ಕೆಳಕಂಡಂತಿದೆ

ರಸೀದಿ ಪುಸ್ತಕ ಸಂಖ್ಯೆ	ಕೊನೆ ರಸೀದಿ/ದಿನಾಂಕ
18	852 / 26–3–2019
24	1181 / 13–4–15

8) ಸಂಸ್ಥೆಯಲ್ಲಿ ಖಾಸಗಿ ಮುದ್ರಣಾಲಯದಿಂದ ಮುದ್ರಿಸಿರುವ ರಸೀದಿ ಪುಸ್ತಕಗಳನ್ನು ಉಪಯೋಗಿಸುತ್ತಿರುವ ಬಗ್ಗೆ :

ನಕ್ಷೆ ಮಂಜೂರಾತಿಗೆ ಸಂಬಂಧಪಟ್ಟಂತೆ ಭೂ ಪರಿವರ್ತನೆ/ವಿನ್ಯಾಸ/ಬದಲಾವಣೆ ಹಾಗೂ ಇತರೆ ವಸೂಲಾತಿ ಮೊತ್ತಗಳನ್ನು ಪ್ರಾಧಿಕಾರದಲ್ಲಿ ರಸೀದಿಗಳ ಮೂಲಕ ವಸೂಲಿಸಲಾಗುತ್ತಿದ್ದು, ಸದರಿ ರಸೀದಿ ಪುಸ್ತಕಗಳನ್ನು ಸ್ಥಳೀಯ ಖಾಸಗಿ ಸಂಸ್ಥೆಗಳ ಮುದ್ರಣಾಲಯದಿಂದ ಮುದ್ರಿಸಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ಈ ರೀತಿ ಖಾಸಗಿ ಮುದ್ರಣಾಲಯದಲ್ಲಿ ಮುದ್ರಿಸಿರುವ ರಸೀದಿ ಪುಸ್ತಕಗಳನ್ನು ಉಪಯೋಗಿಸಿಕೊಳ್ಳಲು ಅವಕಾಶವಿರುವುದಿಲ್ಲ. ಆದ್ದರಿಂದ ಸರ್ಕಾರಿ ಮುದ್ರಣಾಲಯದಿಂದ ಮುದ್ರಿಸಿರುವ ಮೂಲ ಹಾಗೂ ದ್ವಿ ಪ್ರತಿಗಳಿರುವ ಕಾರ್ಬನ್ ಇಂಪ್ರೆಶನ್ ಬೀಳುವ ರಸೀದಿ ಪುಸ್ತಕಗಳನ್ನು ಉಪಯೋಗಿಸುವುದು ನಿಯಮವಾಗಿರುತ್ತದೆ. ಮುಂದಿನ ಅವಧಿಯಲ್ಲಿ ಈ ಬಗ್ಗೆ ಆಡಳಿತ ಮಂಡಳಿಯವರು ಕ್ರಮ ಕೈಗೊಂಡು ನಿರ್ವಹಿಸಲು ಲೆಕ್ಕ ಪರಿಶೋಧನೆಯು ಸೂಚಿಸುತ್ತದೆ.

9) ರಸೀದಿ ಪುಸ್ತಕಗಳಲ್ಲಿನ ನ್ಯೂನತೆಗಳು :

2018–19 ನೇ ಸಾಲಿನ ಲೆಕ್ಕ ತಪಾಸಣೆ ಸಮಯದಲ್ಲಿ ಪರಿಶೀಲಿಸಲಾದ ರಸೀದಿ ಪುಸ್ತಕಗಳಲ್ಲಿ ಕಂಡು ಬಂದ ನ್ಯೂನತೆಗಳು ಈ ರೀತಿ ಇವೆ.

1. ರಸೀದಿ ಪುಸ್ತಕವು ಒಳಗೊಂಡಿರುವ ಒಟ್ಟು ರಸೀದಿಗಳ ಸಂಖ್ಯೆ ಹಾಗೂ ವಿತರಿಸಿದ ದಿನಾಂಕ ಬಗ್ಗೆ ದೃಢೀಕರಣ ಇರುವುದಿಲ್ಲ. ಘೋಷ್ವಾರೆ ಹಾಕಿ ದೃಢೀಕರಿಸಿರುವುದು.
2. ರಸೀದಿ ಪುಸ್ತಕಗಳು ಕಛೇರಿ/ಸಂಸ್ಥೆಯ ಆದಾಯ ಸ್ವೀಕೃತಿಗಳಿಗೆ ಸಂಬಂಧಿಸಿದ ಪ್ರಮುಖ ದಾಖಲಾತಿಯಾಗಿರುವುದರಿಂದ ಅವುಗಳನ್ನು ನಿಗದಿತ ನಮೂನೆಯಲ್ಲಿ ಕ್ರಮಬದ್ಧವಾಗಿ ಮುದ್ರಿಸಿಕೊಂಡು, ಕ್ರಮ ಸಂಖ್ಯೆವಾರು ನಿರ್ವಹಿಸಿಕೊಂಡು ಸರಿಪಡಿಸಿಕೊಳ್ಳುವುದು ಅಗತ್ಯವಾಗಿರುತ್ತದೆ.

10) ಆಯವ್ಯಯ ತಯಾರಿಸದೆ ವೆಚ್ಚ ಭರಿಸಿರುವುದು :

ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರದ 2018–19 ನೇ ಸಾಲಿನ ಅಂದಾಜು ಆಯವ್ಯಯವನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಸೆಕ್ಷನ್ 43 ರಂತೆ ನಗರಾಭಿವೃದ್ಧಿ ಪ್ರಾಧಿಕಾರಗಳು ಪ್ರತಿ ವರ್ಷ ಫೆಬ್ರವರಿ 1ನೇ ತಾರಿಖಿನೊಳಗೆ ವಿಶೇಷ ಸಭೆ ಕರೆದು ಮುಂಬರುವ ಆರ್ಥಿಕ ವರ್ಷದ ಆಯ–ವ್ಯಯವನ್ನು ಮಂಡಿಸಿ Section 45 ರಂತೆ ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆಯಬೇಕಾಗಿರುತ್ತದೆ. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ Section 47 ರಂತೆ ಆಯ–ವ್ಯಯದಲ್ಲಿ ಅವಕಾಶ ಕಲ್ಪಿಸದೇ ಯಾವುದೇ ರೀತಿಯ ವೆಚ್ಚಗಳನ್ನು ಭರಿಸುವಂತಿಲ್ಲ.

ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರವು ಸರ್ಕಾರದ ಅಧೀನ ಕಾರ್ಯದರ್ಶಿ ನಗರಾಭಿವೃದ್ಧಿ ಇಲಾಖೆ ಪತ್ರದ ಸಂಖ್ಯೆ:ನ:ಅ:ಇ 71/ಬೆಂ.ರೂ.ಪ್ರಾ.2018 ದಿನಾಂಕ:–05.09.18 ರಂದು 2018–2019 ನೇ ಸಾಲಿನ ಆಯ–ವ್ಯಯವನ್ನ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 45 ರನ್ವಯ ತುಂಬಾ ತಡವಾಗಿ ಅನುಮೋದನೆ ಪಡೆದಿರುತ್ತಾರೆ.

2018–19 ನಿರೀಕ್ಷಿತ ಆದಾಯ	2018–19 ನಿರೀಕ್ಷಿತ ವಿರ್ಚು
ರೂ.73994280	ರೂ.69313000

Scanned with OKEN Scanner

11) <u>ವಾರ್ಷಿಕ ಲೆಕ್ಕ ಪತ್ರಗಳ ಕುರಿತು</u> :

ಕರ್ನಾಟಕ ನಗರ & ಗ್ರಾಮಾಂತರ ಯೋಜನಾ ಕಾಯ್ದೆ-1961 ರ ಸೆಕ್ಷನ್ 68 D ರಂತೆ ಪ್ರತಿ ನಗರಯೋಜನಾ ಪ್ರಾಧಿಕಾರವು ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸಿ ಆರ್ಥಿಕ ವರ್ಷ ಮುಕ್ತಾಯದ 3 ತಿಂಗಳೊಳಗೆ, ಸರ್ಕಾರಕ್ಕೆ, ನಿರ್ದೇಶಕರು, ನ & ಗ್ರಾ ಯೋ ನಿರ್ದೇಶನಾಲಯ ಹಾಗೂ ಯೋಜನಾ ಮಂಡಳಿಗೆ ಸಲ್ಲಿಸಬೇಕಾಗಿರುತ್ತದೆ. ಸೆಕ್ಷನ್ 4 & 114 ರಂತೆ ಆಯುಕ್ತರು/ ಸದಸ್ಯಕಾರ್ಯದರ್ಶಿಗಳ ಕರ್ತವ್ಯವಾಗಿರುತ್ತದೆ. ಅದರಂತೆ ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರವು 2018-19 ರ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ದಿ:31.01.2020 ರಂದು ಅಂದರೆ ಸುಮಾರು 07 ತಿಂಗಳು ತಡವಾಗಿ ಸಲ್ಲಿಸಿರುತ್ತಾರೆ. ಸದರಿ ವಾರ್ಷಿಕ ಲೆಕ್ಕ ಪತ್ರಗಳನ್ನು ಪರಿಶೀಲಿಸಿ ಕೆಳಕಂಡ ಅಂಶಗಳು ಕಂಡು ಬಂದಿರುತ್ತವೆ.

1. 2018-19 ರ ಸಾಲಿನಲ್ಲಿ ಸಂಸ್ಥೆಯ ಖರ್ಚುಗಿಂತಲೂ ರೂ.3,24,93,462/-ಗಳ ಆದಾಯ ಹೆಚ್ಚಾಗಿರುತ್ತದೆ. Balance Sheetನ ಅನುಬಂಧ-4 & 5 ರಂತೆ ಕಡಿತಗೊಳಿಸಿರುವ ಶಾಸನಾತ್ಮಕ ತೆರಿಗೆಗಳ ಬಾಕಿ ರೂ.83,551/-ಗಳಾಗಿದ್ದು, ಕೂಡಲೆ ಪಾವತಿ ಮಾಡಲು ಕ್ರಮಕೈಗೊಳ್ಳುವುದು ಅಗತ್ಯವಾಗಿರುತ್ತದೆ.
2. ಸಮತೋಲನಾ ಪಟ್ಟಿಯ ಆಸ್ತಿಗಳ ಕಾಲಂನ Current Assetsನಲ್ಲಿ 2015-16 ರಿಂದ 2018-19 ರವರೆಗೆ TDS Receivables ಎಂದು ರೂ.14,99,352/-ಗಳನ್ನು ನಮೂದಿಸಿದ್ದು ಸಂಬಂಧಿಸಿದ ವಿವರಗಳನ್ನು ಲೆಕ್ಕ ತನಿಖೆಗೆ ಒದಗಿಸಿರುವುದಿಲ್ಲ.
3. ಸಮತೋಲನಾ ಪಟ್ಟಿಯ Capital Account ನ ಸಾಮಾನ್ಯ ನಿಧಿ/ನಗರಾಭಿವೃದ್ಧಿ ಪ್ರಾಧಿಕಾರದ ನಿಧಿ ರೂ.7,79,48,247/-ಗಳು ಲಭ್ಯವಿದ್ದು, ಸದರಿ ಮೊತ್ತವನ್ನು ಅಭಿವೃದ್ಧಿಕಾರ್ಯಗಳಿಗೆ ವಿನಿಯೋಗಿಸುವುದು ಅಥವಾ ಹೂಡಿಕೆ ಮಾಡುವುದು ಸಂಸ್ಥೆಯ ಅಭಿವೃದ್ಧಿ ದೃಷ್ಟಿಯಿಂದ ಸೂಕ್ತವಾಗಿರುತ್ತದೆ.
4. ಕೆರೆ ಅಭಿವೃದ್ಧಿ ಶುಲ್ಕ ರೂ.8,29,11,666/-ಗಳು ಲಭ್ಯವಿದ್ದು ಕ್ರಿಯಾಯೋಜನೆ ರೂಪಿಸಿ ನಿಯಮಾನುಸಾರ ಕೆರೆಗಳ ಪುನಃಶ್ಚೇತನ ಕಾಮಗಾರಿಗಳಿಗೆ ವಿನಿಯೋಗಿಸುವುದು ಅಗತ್ಯವಾಗಿರುತ್ತದೆ.

12) <u>ಆಯ-ವ್ಯಯ ವಾಸ್ತವಿಕ ಇಲ್ಲದಿರುವುದು</u> :

2018-2019 ನೇ ಆಯ-ವ್ಯಯಕ್ಕೆ ಹೊಲಿಕೆ ಮಾಡಿದಾಗ

2018-19 ನಿರೀಕ್ಷಿತ ಆದಾಯ	2018-19 ನಿರೀಕ್ಷಿತ ವ್ಯಯ
ರೂ.73994280	ರೂ.69313000
ವಾಸ್ತವಿಕ ಆದಾಯ	ವಾಸ್ತವಿಕ ಖರ್ಚು
ರೂ.40672168-00	ರೂ.59066373-00

ರೂ.18394205/- ಆದಾಯಕ್ಕಿಂತ ಖರ್ಚು ಜಾಸ್ತಿ ಆಗಿದ್ದು (-) 18394205/-ವಿವರ ಕೋರಿದೆ.

ವ್ಯತ್ಯಾಸ ಆದಾಯ	ವ್ಯತ್ಯಾಸ ಖರ್ಚು
ರೂ.33322112-00	ರೂ.10246627-00

ಅನುಮೋದಿತ ಆಯ-ವ್ಯಯಕ್ಕೆ ಹೋಲಿಕೆ ಮಾಡಿದಾಗ ನಿರೀಕ್ಷಿತ ಆದಾಯಕ್ಕಿಂತಲೂ, ವಾಸ್ತವಿಕ ಆದಾಯ ರೂ.33322112-00 ಕುಂಟಿತವಾಗಲೂ ಹಾಗೂ ಅಜಗಜಾಂತರ ವ್ಯತ್ಯಾಸಕ್ಕೆ ಸೂಕ್ತವಿವರ ಕೋರಿದೆ. ಹಾಗೆಯೇ ನಿರೀಕ್ಷಿತ ಖರ್ಚಿಗಿಂತಲೂ, ವಾಸ್ತವಿಕ ಖರ್ಚು ರೂ.10246627-00 ಅಜಗಜಾಂತರ ವ್ಯತ್ಯಾಸಕ್ಕೆ ಸೂಕ್ತ ವಿವರ ಕೋರಿದೆ.

13) <u>ಆರ್ಥಿಕ ಪರಿಸ್ಥಿತಿ</u> :

ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರವು 2018-19 ರ ಅಂತ್ಯಕ್ಕೆ ಆರ್ಥಿಕ ವಹಿವಾಟನ್ನು ಮೂರು ಬ್ಯಾಂಕ್ ಖಾತೆಗಳಲ್ಲಿ ನಡೆಸುತ್ತಿದ್ದು ವಿವರಗಳು ಕೆಳಕಂಡಂತಿವೆ.

ಕ್ರ ಸಂ.	ಅವಧಿ	ಬ್ಯಾಂಕ್ ಹೆಸರು	ಖಾತೆ ಸಂಖ್ಯೆ	ಪ್ರಾರಂಭ ಶಿಲ್ಕು	ಸ್ವೀಕೃತಿ	ಒಟ್ಟು	ವೆಚ್ಚ	ಅಖೈರು ಶಿಲ್ಕು
1	2018-19 ಉತ್ತಮತೆ & ಇತರೆ ಶಿಲ್ಕು	ವಿಜಯ ಬ್ಯಾಂಕ್	296	15429891	62433108	77862999	73528553	4334446
2	2018-19 ಕೆರೆ ಅಭಿವೃದ್ಧಿ	SBM	750278	5162323	32967516	38129839	30030444	8099395
3	2018-19 ಸಿ.ಎ.ನಿವೇಶನ	ಸೆಂಟ್ರಲ್ ಬ್ಯಾಂಕ್	126067	-	-	-	-	-
4	2018-19 F.D	ಸೆಂಟ್ರಲ್ ಬ್ಯಾಂಕ್ C.B.I	3561260673	64088	34019809	34083897	34083897	-
5	2018-19 E.From 14-1-19 to 30.3.2019 New A/C	SBM	38179983427	-	8375158	8375158	5710	8369448

Scanned with OKEN Scanner

	2018–2019 New A/C E.From 24.8.2018	ಕರ್ನಾಟಕ ಬ್ಯಾಂಕ್ C.B.Pura C.A.Sites	101283801	–	94314924	94314924	90495776	3819148
			ಒಟ್ಟು	20656302	232110515	252766817	228144380	24622437

14) ವರ್ಗೀಕೃತ ಜಮಾ ಮತ್ತು ಖರ್ಚಿನ ವಹಿ :

2018–19ರ ಸಾಲಿನಲ್ಲಿ ಪ್ರಾಧಿಕಾರದಲ್ಲಿ ಸ್ವೀಕರಿಸಿದ ಜಮಾ ಹಾಗೂ ಭರಿಸಲಾದ ವೆಚ್ಚಗಳಿಗೆ ಸಂಬಂಧಿಸಿದಂತೆ ವರ್ಗೀಕೃತ ಜಮಾ ಮತ್ತು ಖರ್ಚಿನ ವಹಿಯನ್ನು ನಿರ್ವಹಿಸಿ ಲೆಕ್ಕ ತನಿಖೆಗೆ ಹಾಜರುಪಡಿಸಿರುವುದಿಲ್ಲ. ಪ್ರಾಧಿಕಾರದವರು ನೀಡಿದ ವಿವರಗಳಂತೆ 2018–19 ರ ಸಾಲಿನ ವರ್ಗೀಕೃತ ಜಮಾ ಮತ್ತು ಖರ್ಚಿನ ವಿವರಗಳನ್ನು ಸಿದ್ಧಪಡಿಸಿ ಅನುಬಂಧ–1 ರಲ್ಲಿ ವರದಿಗೆ ಲಗತ್ತಿಸಲಾಗಿದೆ.

15) ವಾರ್ಷಿಕ ಆಡಳಿತ ವರದಿ :

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 68 ಡಿ ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರದ ನಿಯಮಗಳು 1965ರ ನಿಯಮ 29 ರಂತೆ ನಮೂನೆ–5ರಲ್ಲಿ ಜಮಾ ಖರ್ಚುಗಳ ನಮೂನೆಯೊಡನೆ ವಾರ್ಷಿಕ ಆಡಳಿತ ವರದಿ ತಯಾರಿಸಿ ಸರ್ಕಾರಕ್ಕೆ ಜೂನ್–30 ರೊಳಗಾಗಿ ಸಲ್ಲಿಸಬೇಕಾಗಿರುತ್ತದೆ. 2018–19 ನೇ ಸಾಲಿನಲ್ಲಿ ಇದುವರೆವಿಗೂ ವಾರ್ಷಿಕ ಆಡಳಿತ ವರದಿಯನ್ನು ಸಲ್ಲಿಸಿರುವ ಬಗ್ಗೆ ಲೆಕ್ಕ ಪರಿಶೋಧನೆಗೆ ವಿವರ ಲಭ್ಯವಾಗಿರುವುದಿಲ್ಲ.

16) ಋಣ ಶೀರ್ಷಿಕೆಗಳು :

1. ಸಾಲಗಳು :

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಸೆಕ್ಷನ್ 40ರಂತೆ ಪ್ರಾಧಿಕಾರವು ಸರ್ಕಾರವು ಪೂರ್ವ ಮಂಜೂರಾತಿ ಯೊಂದಿಗೆ ಸಾಲಗಳನ್ನು ಪಡೆಯುವ ಅಧಿಕಾರ ಹೊಂದಿರುತ್ತದೆ. ಆದರೆ ಪ್ರಾಧಿಕಾರವು ಯಾವುದೇ ಮೂಲಗಳಿಂದ ಸಾಲಗಳನ್ನು ಪಡೆದಿರುವುದಿಲ್ಲ.

2. ಅನುದಾನಗಳು :

2018–19ನೇ ಸಾಲಿನಲ್ಲಿ ಪ್ರಾಧಿಕಾರವು ಸರ್ಕಾರದಿಂದಾಗಲೀ ಅಥವಾ ಇತರೆ ಯಾವುದೇ ಮೂಲದಿಂದ ಅನುದಾನಗಳನ್ನು ಪಡೆದಿರು ವುದಿಲ್ಲ.

3. ವಂತಿಕೆಗಳು :

2018–19ನೇ ಸಾಲಿನಲ್ಲಿ ಪ್ರಾಧಿಕಾರವು ಯಾವುದೇ ವಂತಿಕೆ ಪಾವತಿಸಿರುವುದಾಗಲೀ ಅಥವಾ ವಂತಿಕೆಗಳನ್ನು ಸ್ವೀಕರಿಸಿರುವುದಾಗಲೀ ಕಂಡು ಬಂದಿರುವುದಿಲ್ಲ.

17) ವಹಿಗಳ ನಿರ್ವಹಣೆ ಬಗ್ಗೆ :

i. ಸ್ಥಿರಾಸ್ತಿ ಮತ್ತು ಚರಾಸ್ತಿ ವಹಿ :

ಪ್ರಾಧಿಕಾರವು ಹೊಂದಿರುವ ಸ್ಥಿರ ಮತ್ತು ಚರ ಆಸ್ತಿಗಳ ಬಗ್ಗೆ ವಹಿಯನ್ನು ನಿರ್ವಹಿಸದಿರವುದು ಕಂಡು ಬಂದಿದ್ದು ಇದರಿಂದಾಗಿ ಪ್ರಾಧಿಕಾರದ ಆಸ್ತಿಗಳ ನಷ್ಟ ಅಥವಾ ದುರುಪಯೋಗವಾಗುವ ಸಾಧ್ಯತೆಗಳಿರುತ್ತವೆ. ನಿರ್ವಹಿಸುವುದು. ಆರ್ಥಿಕ ವರ್ಷಾಂತ್ಯಕ್ಕೆ ಸಾಮಗ್ರಿಗಳ ಹಾಗೂ ಸ್ಥಿರಾಸ್ತಿಗಳ ಭೌತಿಕ ಸತ್ಯಾಪನೆ ಮಾಡಿ ಅದರ ಫಲಿತಾಂಶವನ್ನು ವಹಿಯಲ್ಲಿ ನಮೂದಿಸುವುದು ಅಗತ್ಯವಾಗಿರುತ್ತದೆ.

ii. ಠೇವಣಿ ವಹಿ :

ಪ್ರಾಧಿಕಾರಕ್ಕೆ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿದಾಗ ಸಾರ್ವಜನಿಕರು ಪಾವತಿಸುವ ಪ್ರಾರಂಭಿಕ ಠೇವಣಿ ವಿವರಗಳನ್ನು ಠೇವಣಿ ವಹಿ ಯಲ್ಲಿ ನಮೂದಿಸಿ ಠೇವಣಿ ವಹಿ ನಿರ್ವಹಿಸಬೇಕಾಗಿರುತ್ತದೆ ಹಾಗೂ ಪ್ರತಿ ವರ್ಷಾಂತ್ಯಕ್ಕೆ ಫೋಷ್ಟಾರೆ ನಮೂದಿಸಬೇಕಾಗಿರುತ್ತದೆ. ಠೇವಣಿ ಮರು ಪಾವತಿ ಮಾಡುವಾಗ ಠೇವಣಿ ವಹಿಯಲ್ಲಿ ಷರಾ ನಮೂದಿಸಿ ಮರುಪಾವತಿ ಮಾಡುಬೇಕಾಗಿರುತ್ತದೆ. ಆದರೆ ಸದರಿ ವಹಿಯನ್ನು ನಿರ್ವಹಿಸದಿರುವುದು ಕಂಡು ಬಂದಿರುತ್ತದೆ. ಇದರಿಂದಾಗಿ ಠೇವಣಿ ಮೊತ್ತದ ನಷ್ಟ ಅಥವಾ ದುರುಪಯೋಗವಾಗುವ ಸಾಧ್ಯತೆಗಳಿರುತ್ತವೆ.

18) ಸಾಮಾನ್ಯ ಆದಾಯ ಮತ್ತು ಸಾಮಾನ್ಯ ವೆಚ್ಚದ ಬಗ್ಗೆ :

ಪ್ರಾಧಿಕಾರದ ಕಳೆದ 3 ವರ್ಷಗಳ ಸಾಮಾನ್ಯ ಆದಾಯ ಮತ್ತು ಸಾಮಾನ್ಯ ವೆಚ್ಚದ ಅಂಕಿ ಅಂಶಗಳು ಈ ಕೆಳಕಂಡಂತಿದೆ.

ಸಾಲು	ಸಾಮಾನ್ಯ ಆದಾಯ	ಸಾಮಾನ್ಯ ಖರ್ಚು
2016–17	874218	166260
2017–18	1134706	354160
2018–19	232110515	228144380
ಒಟ್ಟು	234119439	228664800
ಸರಾಸರಿ	**78039813**	**76221600**

Scanned with OKEN Scanner

ಪ್ರಾಧಿಕಾರವು ಕರ್ನಾಟಕ ನಗರ ಯೋಜನಾ ಪ್ರಾಧಿಕಾರಗಳ ಕಾಯ್ದೆಯ ಕಲಂ 18ರಂತೆ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ ಕಲಂ 20ರಂತೆ ಸಂಗ್ರಹಿಸುವ ಉತ್ತಮತೆ ಶುಲ್ಕಗಳನ್ನು ಪರಿಷ್ಕರಿಸಿ ಸಾಮಾನ್ಯ ಆದಾಯ ಹೆಚ್ಚಿಸಿಕೊಳ್ಳುವುದು.

117166950 520420

19) ಉತ್ತಮತೆ ಶುಲ್ಕದ ದರಗಳನ್ನು ಪರಿಷ್ಕರಿಸದಿರುವುದರಿಂದ ಪ್ರಾಧಿಕಾರಕ್ಕೆ ನಷ್ಟವಾಗಿರುವುದು :

ಪ್ರಾಧಿಕಾರವು ಖಾಸಗಿ ಭೂ ಪರಿವರ್ತನೆ ವಿನ್ಯಾಸ ನಕ್ಷೆಗಳನ್ನು ಅನುಮೋದಿಸುವಾಗ ಸರ್ಕಾರಿ ಅಧಿಸೂಚನೆ ಹೆಚ್‌ಯುಡಿ 507 ಟಿಟಿಪಿ 93 ಬೆಂಗಳೂರು ದಿನಾಂಕ:19-11-1993ರಲ್ಲಿ ನಿಗದಿಪಡಿಸಿದ ದರಗಳಂತೆ ಉತ್ತಮತೆ ಶುಲ್ಕವನ್ನು ವಸೂಲಿ ಮಾಡುತ್ತಿರುತ್ತಾರೆ.

ಕರ್ನಾಟಕ ನಗರ ಯೋಜನಾ ಪ್ರಾಧಿಕಾರಗಳ ಕಾಯ್ದೆ, 1961 ರ ಸೆಕ್ಷನ್ 18ರಲ್ಲಿ ಉತ್ತಮತೆ ಶುಲ್ಕವನ್ನು ಕೆಳಕಂಡ ದರಗಳಲ್ಲಿ ಸಂಗ್ರಹಿಸಬೇಕೆಂದು ಶಾಸನಾತ್ಮಕ ನಿಬಂಧನೆಯನ್ನು ವಿಧಿಸಲಾಗಿದೆ.

"Where Permissions for change of land use or development of land or bulding is granted under section 14A or section 14B or section 15 or section 17 and such change of land use or development is capable or yielding a better income to the owner the planning Authority may levy a prescribed fee not exceeding one- third of the estimated increase in the value of the land or building in the prescribed manner for permitting such change of land use or development of Land or building"

ಪ್ರಸ್ತುತ 1993 ರಲ್ಲಿ ನಿಗದಿಪಡಿಸಿದ ದರಗಳಲ್ಲಿ ಈಗಲೂ ಉತ್ತಮತೆ ಶುಲ್ಕ ವಸೂಲಿ ಮಾಡಲಾಗುತ್ತಿದೆ. ಆದರೆ 1993ರಿಂದ ಇಲ್ಲಿಯವರೆಗೆ ಭೂಮಿಯ ಮೌಲ್ಯದಲ್ಲಿ ಅಗಾಧ ಹೆಚ್ಚಳ ಉಂಟಾಗಿರುತ್ತದೆ. ಸರ್ಕಾರವು ಆಗ್ಗಿಂದಾಗ್ಗೆ ಭೂಮಿಯ ಮಾರ್ಗಸೂಚಿ ಮೌಲ್ಯ (guidance value) ವನ್ನು ಪರಿಷ್ಕರಿಸಿರುತ್ತದೆ. ಆದರೆ ನಗರ ಯೋಜನಾ ಇಲಾಖೆಯ ಉತ್ತಮತೆ ಶುಲ್ಕದ ದರಗಳನ್ನು ಪರಿಷ್ಕರಿಸದಿರುವುದರಿಂದ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಬರಬಹುದಾಗಿದ್ದ ಹೆಚ್ಚುವರಿ ಆದಾಯ ತಪ್ಪಿ ಹೋಗಲು ಕಾರಣವಾಗಿರುತ್ತದೆ. ಪ್ರಾಧಿಕಾರದ ಆಡಳಿತ ವರ್ಗ ಈ ಬಗ್ಗೆ ತತ್‌ಕ್ಷಣದ ಕ್ರಮ ಕೈಗೊಂಡು ಪ್ರಾಧಿಕಾರದ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ ಕಾಯ್ದೆಯ ನಿಬಂಧನೆಗಳಂತೆ ಕೃಷಿ ಉದ್ದೇಶದಿಂದ ಇತರೆ ಉದ್ದೇಶಕ್ಕೆ ಭೂ ಪರಿವರ್ತನೆಗೊಂಡು ವಿನ್ಯಾಸ ನಕ್ಷೆ ಅನುಮೋದಿಸುವಾಗ ಉತ್ತಮತೆ ಶುಲ್ಕವನ್ನು ನಗರ ಯೋಜನಾ ಪ್ರಾಧಿಕಾರಗಳ ಕಾಯ್ದೆಯ ಸೆಕ್ಷನ್ 18ರಂತೆ ವಸೂಲಿ ಮಾಡಲು ಕ್ರಮ ವಹಿಸುವುದು.

ಪ್ರಾಧಿಕಾರವು 2018-19ರ ಸಾಲಿನಲ್ಲಿ ಅನುಮೋದಿತ ನಿವೇಶನ/ಬಡಾವಣೆಗಳಿಂದ ವಸೂಲಿಸಿರುವ ವಿವಿಧ ಶುಲ್ಕಗಳ ವಿವರಗಳನ್ನು ಅನುಬಂಧ-04 ರಲ್ಲಿ ನೀಡಿದೆ.

ಮೇಲ್ಕಂಡಂತೆ ರೂ.**11,43,63,511**/-ಗಳನ್ನು ಸಂಬಂಧಪಟ್ಟ ಬಡಾವಣೆ ಮಾಲೀಕರಿಂದ ವಸೂಲಿ ಮಾಡುವವರೆಗೂ ಸದರಿ ಮೊತ್ತವನ್ನು ಆಕ್ಷೇಪಣೆಯಲ್ಲಿಡಲಾಗಿದೆ.

20) ನಗರ ಯೋಜನಾ ಮಂಡಳಿಗೆ ಶೇಕಡಾ 5 ರ ವಂತಿಕೆ ಪಾವತಿಸದಿರುವುದು :

ಪ್ರಾಧಿಕಾರವು ತಾನು ಸಂಗ್ರಹಿಸಿದ ಉತ್ತಮತೆ ಶುಲ್ಕದ ಶೇಕಡಾ 5 ರಷ್ಟನ್ನು ನಗರ ಯೋಜನಾ ಮಂಡಳಿಗೆ ವಂತಿಕೆ ರೂಪದಲ್ಲಿ ಪಾವತಿಸಬೇಕಾಗಿರುತ್ತದೆ. ಆದರೆ ಸದರಿ ಪ್ರಾಧಿಕಾರವು 2018-19 ರಲ್ಲಿ ವಂತಿಕೆ ಪಾವತಿಸಿರುವುದಿಲ್ಲ. ಲೆಕ್ಕ ತನಿಖಾ ಸಾಲಿನಲ್ಲಿ ಈ ಕೆಳಕಂಡಂತೆ ಉತ್ತಮತೆ ಶುಲ್ಕವನ್ನು ವಸೂಲಿ ಮಾಡಲಾಗಿದೆ.

ಸಾಲು	ಮೊತ್ತ
2018-19	1464250-00
ಒಟ್ಟು	73212-00

ಮೇಲ್ಕಂಡ ಮೊತ್ತದಲ್ಲಿ ಶೇಕಡಾ 5ರಷ್ಟು ಮೊತ್ತ ಅಂದರೆ ರೂ.**73212**/-ಗಳನ್ನು ನಗರ ಯೋಜನಾ ಮಂಡಳಿಗೆ ಕೂಡಲೇ ಪಾವತಿಸಲು ಸೂಚಿಸಿದೆ.

21) ನಾಗರೀಕ ಮತ್ತು ಪಾರ್ಕ್ ಅಭಿವೃದ್ಧಿ ಸೌಲಭ್ಯದ ವಿವರಗಳನ್ನು ಆಸ್ತಿ ವಹಿಗೆ ದಾಖಲಿಸುವುದು :

ಸದರಿ ವಹಿಯನ್ನು ಪರಿಶೀಲಿಸಲಾಗಿ ಮಾಹಿತಿಗಳು ಅಪೂರ್ಣವಾಗಿ ದಾಖಲಿಸಿದ್ದು, ಅಧಿಕಾರಿಗಳಿಂದ ದೃಢೀಕರಿಸಿರುವುದಿಲ್ಲ. ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಯೋಜನಾ ಪ್ರಾಧಿಕಾರವು ನಕ್ಷೆ ವಿನ್ಯಾಸ ಅನುಮೋದನೆ ಮಾಡಿರುವ ಪ್ರಕರಣಗಳ ಬಡಾವಣೆಗಳಲ್ಲಿ ನಾಗರೀಕ ಸೌಲಭ್ಯ ಮತ್ತು ಪಾರ್ಕ್ ಅಭಿವೃದ್ಧಿಗೆ ಕಾಯ್ದಿರಿಸಿರುವ ಜಾಗಗಳನ್ನು ಸರ್ವೇನಂ, ಚೆಕ್ಕುಬಂದಿಗಳನ್ನು ಗುರುತಿಸಿ ಹಾಗೂ ಸಿ.ಎ. ಜಾಗಗಳನ್ನು ಅಳತೆ ನಮೂದಿಸಿ ಸಂಖ್ಯೆಗಳನ್ನು ನೀಡಿ ಪ್ರಾಧಿಕಾರದ ಸ್ಥಿರಾಸ್ತಿ ವಹಿಯಲ್ಲಿ ದಾಖಲಿಸಿ ಸಕ್ಷಮ ಅಧಿಕಾರಿಗಳಿಂದ ದೃಢೀಕರಿಸಲು ಸೂಚಿಸಿದೆ.

Scanned with OKEN Scanner

2) 2018–19 ರ ಸಾಲಿನ ವೆಚ್ಚಗಳ ಕುರಿತು :

ಕ್ರ.ಸಂ.	ಸರಕು ಸೇವೆ / ಸಂಸ್ಥೆ / ಅಂಗಡಿ	ಚೆಕ್ ಸಂಖ್ಯೆ/ ದಿನಾಂಕ	ರೂ.ಮೊತ್ತ	ಸರಕು ವಿವರ
1	S.S.P ಇಂಜಿನಿಯರ್ಸ್	265159/ 13.8.18 265158/ 13.8.18	416191–00 76706–00	ಪಠೋಪಕರಣಗಳನ್ನು ಖರೀದಿಸಿದ್ದು
2	J.K.Hardware	333716/ 10.1.19	44621–00	ಇತರೆ ಸಾಮಗ್ರಿ ಖರೀದಿ
3	Neha Enterpriuss	649591/ 8.6.19 649590	56840–00 29500–00	– ॥ –
4	Vissjon solution	649541/2.4.18	421250–00	ಮಾಸ್ಟರ್ ಪ್ಲಾನ್ ವೆಚ್ಚ
5	ಸ್ನಷ್ಕಿ ಡಿಸೈನ್ ಹೊರಗುತ್ತಿಗೆ ವಾಹನ	333717/16.1.19	363440–00	ಹೊರಗುತ್ತಿಗೆ ವಾಹನ ಬಾಡಿಗೆ ವೆಚ್ಚ
6	– ॥ –	/7.4.18		
7	ಸ್ಕಂದ ಟೂರ್ಸ್ & ಟ್ರಾವೇಲ್ಸ್	649599/ 10,11,12/18 649570/ 265168/	273000–00	ಹೊರಗುತ್ತಿಗೆ ವಾಹನ ಬಾಡಿಗೆ ವೆಚ್ಚ
8	ಕಛೇರಿ ಬಾಡಿಗೆ	342251	157728–00	ಕಛೇರಿ ಬಾಡಿಗೆ
9	Man power	–	794515–00	ಹೊರಗುತ್ತಿಗೆ ಸಿಬ್ಬಂದಿ
10	ಠೇವಣಿ ಬ್ಯಾಂಕ್ ಖರೀದಿ ವಿಜಯ ಬ್ಯಾಂಕ್	–	50000000	ಠೇವಣಿ ಇಟ್ಟಿದ್ದು
11	ಸಿ.ಎ.ನಿವೇಶನ	–	3819700–00	C.A.Sites ಅಭಿವೃದ್ಧಿ
12	ಅಧಿಕಾರಿ ಸಿಬ್ಬಂದಿ ವೇತನ	–	1778632–00	ವೇತನ ಬಾಬ್ತು
13	ಪೇಪರ್ ಪ್ರಕಟಣೆ ವೆಚ್ಚ	–	133428–00	ಪ್ರಕಟಣೆ ವೆಚ್ಚ
14	ಕಛೇರಿ ವೆಚ್ಚಗಳ ಇತರೆ	–	700822–00	ಇತರೆ ವೆಚ್ಚ
		ಒಟ್ಟು ಖರ್ಚು	**59066373–00**	

23) ಅಧಿಕಾರಿ ಮತ್ತು ಸಿಬ್ಬಂದಿ ವರ್ಗದ ಹುದ್ದೆಗಳಿಗೆ ಸರ್ಕಾರದ ಮಂಜೂರಾತಿ ಅನುಮೋದನೆ ಪಡೆದಿಲ್ಲ :

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ನಅಇ 239 ಬೆಂರೂಪ್ರಾ 2015, ಬೆಂಗಳೂರು, ದಿನಾಂಕ:07.01.2016 ರಂತೆ ಪ್ರಾಧಿಕಾರಕ್ಕೆ ವಿವಿಧ ಹುದ್ದೆಗಳನ್ನು ಸೃಜಿಸಲಾಗಿರುತ್ತದೆ. ಸದರಿ ಆದೇಶದಲ್ಲಿ ವಿಧಿಸಿರುವ ಷರತ್ತುಗಳಂತೆ ಮಂಜೂರಾಗಿರುವ ಹುದ್ದೆಗಳನ್ನು ಮುಂದು ವರೆಸಲು ಪ್ರತಿ ವರ್ಷ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಮಂಜೂರಾತಿ ಪಡೆಯಬೇಕಾಗಿರುತ್ತದೆ. ಆದರೆ ಸದರಿ ಹುದ್ದೆಗಳನ್ನು ಮುಂದುವರೆಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಮಂಜೂರಾತಿ ಪಡೆಯಬೇಕಾಗಿತ್ತು. ಮಂಜೂರಾತಿ ಪಡೆದಿರುವುದಿಲ್ಲ. ಸರ್ಕಾರಿ ಆದೇಶವನ್ನು ಉಲ್ಲಂಘನೆಯಾಗಿರುತ್ತದೆ. ಆದ್ದರಿಂದ ಕೂಡಲೆ ಮಂಜೂರಾದ ಹುದ್ದೆಗಳನ್ನು ಮುಂದುವರೆಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಅನುಮೋದನೆ ಪಡೆಯಲು ಸೂಚಿಸಿದೆ.

ಸರ್ಕಾರದ ಆದೇಶದ ಸಂಖ್ಯೆ:ಅಇ/6TFP 2018 ಬೆಂಗಳೂರು ದಿನಾಂಕ:–29–12–2018, ಹೊರಗುತ್ತಿಗೆ ಮೇಲೆ ಸಿಬ್ಬಂದಿಯನ್ನು ನೇಮಿಸಿಕೊಳ್ಳುವ ಬಗ್ಗೆ ಸರ್ಕಾರದ ಆದೇಶದ ಸಂಖ್ಯೆ : ಅ.ಇ. TFP 2018 ದಿ:–14–05–2018 ರ ಕ್ರಸಂಖ್ಯೆ 26 ರಲ್ಲಿ ಇಲಾಖಾ ಮುಖ್ಯಸ್ಥರಿಗೆ ಹೊರಗುತ್ತಿಗೆ ಮೇಲೆ ಮಾನವ ಸಂಪನ್ಮೂಲ ತೆಗೆದುಕೊಳ್ಳಲು ಪ್ರತ್ಯಯೇಜಿಸಿರುವ ಪೂರ್ಣ ಅಧಿಕಾರ ಹಿಂಪಡೆದಿದ್ದು ಪ್ರಸ್ತುತ ಎಲ್ಲಾ ಇಲಾಖೆಗಳು **ಗ್ರೂಪ್'ಡಿ' ಬೆರಳಚ್ಚುಗಾರರು/ಡಿಇಒ/ವಾಹನ ಚಾಲಕರ ಖಾಲಿಹುದ್ದೆಗಳಿಗೆ ಎದುರಾಗಿ ಹೊರಗುತ್ತಿಗೆ ಮೇಲೆ ನೇಮಿಸಿಕೊಳ್ಳಲು ಮಂಜೂರಾದ ಹುದ್ದೆಗಳು ಹಾಗೂ ಖಾಲಿ ಹುದ್ದೆಗಳ ವಿವರಗಳನ್ನು ಆರ್ಥಿಕ ಇಲಾಖೆಗೆ ಸಲ್ಲಿಸಿ ಕಡ್ಡಾಯವಾಗಿ ಅನುಮೋದನೆ ಪಡೆಯಲು ಆದೇಶವಿದ್ದರೂ ಸಹ,** ಹೊರಗುತ್ತಿಗೆ ಮಾನವ ಸಂಪನ್ಮೂಲ ಹೊರಗುತ್ತಿಗೆ ಸಿಬ್ಬಂದಿಗೆ ವೇತನ ರೂ.794515/– ಪ್ರಾಧಿಕಾರ ಪಾವತಿಸಿರುವುದು ಸರ್ಕಾರಿ ಆದೇಶ ಉಲ್ಲಂಘನೆಯಾಗಿದೆ. ರೂ.794515/– ಆಕ್ಷೇಪಣೆಯಲ್ಲಿಡಲಾಗಿದೆ.
ಸರ್ಕಾರಿ ಆದೇಶದಂತೆ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಮಂಜೂರಾತಿ ಹುದ್ದೆಗಳ ವಿವರ ಕೆಳಕಂಡಂತಿದೆ.

ಕ್ರ.ಸಂ.	ಹುದ್ದೆಯ ಹೆಸರು	ಮಂಜೂರಾದ ಹುದ್ದೆ	ಕಾರ್ಯ ನಿರ್ವಹಿಸುತ್ತಿರುವ ಹುದ್ದೆ	ಖಾಲಿ ಹುದ್ದೆ	ಷರಾ
1	ಸಹಾಯಕ ನಗರ ಯೋಜಕ	01	01	–	
2	ನಗರ ಯೋಜನ ತಾಂತ್ರಿಕ ಸಿಬ್ಬಂದಿ	01	01	–	
3	ಪ್ರಥಮ ದರ್ಜೆ ಸಹಾಯಕ	01	–	01	
4	ರಾಜ್ಯ ಲೆಕ್ಕಪತ್ರ ಇಲಾಖೆ ಯಿಂದ ಲೆಕ್ಕಾಧಿಕಾರಿ	01	–	01	
5	ಸಹಾಯಕ ಅಭಿಯಂತರರು	01	–	01	
	ಒಟ್ಟು	**05**	**02**	**03**	

Scanned with OKEN Scanner

24) ಲೆಕ್ಕ ತನಿಖಾ ಶುಲ್ಕದ ಬಗ್ಗೆ :

2018–19ರ ಸಾಲಿಗೆ ಲೆಕ್ಕಪರಿಶೋಧನಾ ಶುಲ್ಕದ ಲೆಕ್ಕಾಚಾರ ಈ ಕೆಳಕಂಡಂತಿದೆ.

ಒಟ್ಟು ಜಮೆ ಮತ್ತು ಖರ್ಚು	99738541
ಜಮೆಯಲ್ಲಿ ಕಳೆಯಬೇಕಾದದು	
ಬ್ಯಾಂಕ್ ಬಡ್ಡಿ	740713
ಭದ್ರತಾ ಠೇವಣಿ	10394086
ಒಟ್ಟು	11134799
ಒಟ್ಟು ವೆಚ್ಚದಲ್ಲಿ ಕಳೆಯಬೇಕಾದದು	
ಬ್ಯಾಂಕ್ ವೆಚ್ಚ	1879
ನಿಶ್ಚಿತ ಠೇವಣಿ	50018000
ಒಟ್ಟು	50019879
ಲೆಕ್ಕ ಪರಿಶೋಧನಾ ಶುಲ್ಕದ ಪರಿಗಣಿಸಬೇಕಾಗಿರುವುದು ಜಮೆ ಮತ್ತು ಖರ್ಚು	38583863

ಲೆಕ್ಕ ತನಿಖಾ ಶುಲ್ಕ ಪ್ರತಿ ರೂ.100 ಗಳ ನಿವ್ವಳ ಆರ್ಥಿಕ ವಹಿವಾಟಿಗೆ 0.20 ಪೈಸೆಯಂತೆ ಒಟ್ಟು ರೂ.3,85,83,863/– ವಹಿವಾಟಿಗೆ ಒಟ್ಟು ರೂ.77,241/–ಗಳನ್ನು ಹಿರಿಯ ಉಪನಿರ್ದೇಶಕರು, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ, ಚಿಕ್ಕಬಳ್ಳಾಪುರ ಇವರ ಹೆಸರಿನಲ್ಲಿ ಚೆಕ್ ನೀಡಲು ಸೂಚಿಸಿದೆ.

ನಗರಾಭಿವೃದ್ಧಿ ಪ್ರಾಧಿಕಾರವು ಸರ್ಕಾರಕ್ಕೆ ಪಾವತಿಸಬೇಕಾದ ಲೆಕ್ಕ ತನಿಖಾ ಶುಲ್ಕದ ಬಾಕಿ ಈ ಕೆಳಕಂತಿದೆ.

ಲೆಕ್ಕ ಶೀರ್ಷಿಕೆ :

0070	ಇತರೆ ಆಡಳಿತ ಸೇವೆಗಳು
60	ಇತರೆ ಸೇವೆಗಳು
110	ಸರ್ಕಾರಿ ಲೆಕ್ಕ ಪರಿಶೋಧನಾ ಶುಲ್ಕ
0–01	ಲೆಕ್ಕಪರಿಶೋಧನಾ ಶುಲ್ಕ

ಪ್ರಾಧಿಕಾರವು ಸರ್ಕಾರಕ್ಕೆ ಪಾವತಿಸಬೇಕಾದ ಲೆಕ್ಕ ತನಿಖಾ ಶುಲ್ಕದ ಬಾಕಿ ಈ ಕೆಳಕಂಡಂತಿದೆ.

1–4–2018 ಕ್ಕೆ ಪ್ರಾರಂಭಿಕ ಶಿಲ್ಕು	116178
2018–19 ರ ಬೇಡಿಕೆ	77168
ಒಟ್ಟು	193346
2018–19 ರ ಪಾವತಿ	–
31–3–2019 ಕ್ಕೆ ಬಾಕಿ	193346

25) ಸಾಮಾನ್ಯ ಅಭಿಪ್ರಾಯ :

ಪ್ರಾಧಿಕಾರದ ಲೆಕ್ಕ ಪತ್ರಗಳ ನಿರ್ವಹಣೆ ಸಾಧಾರಣವಾಗಿದ್ದು ಸುಧಾರಣೆ ಅಗತ್ಯವೆಂದು ಲೆಕ್ಕತನಿಖೆ ಅಭಿಪ್ರಾಯಪಡುತ್ತದೆ. ಸಂಸ್ಥೆಯ ಲೆಕ್ಕಪತ್ರಗಳ ಸುಧಾರಣೆಯ ದೃಷ್ಟಿಯಿಂದ ಈ ಕೆಳಕಂಡ ವಹಿ ಅಥವಾ ದಾಖಲೆಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡುವುದು ಅಗತ್ಯವಾಗಿದೆ.

1. ಹೂಡಿಕೆಗಳ ವಹಿಯನ್ನು ನಿಗದಿತ ವಹಿಯಲ್ಲಿ ನಿರ್ವಹಿಸಿ ವರ್ಷದ ಅಂತ್ಯದಲ್ಲಿ ಫೋಷ್ವಾರೆ ನಮೂದಿಸುವುದು.
2. ಮುಂಗಡಗಳು ಮತ್ತು ಸಾಲಗಳ ಬಗ್ಗೆ, ನಿಗದಿತ ಪ್ರತ್ಯೇಕ ವಹಿಗಳನ್ನು ನಿರ್ವಹಿಸುವುದು.
3. ರಸೀದಿ ಪುಸ್ತಕಗಳು ಪ್ರಮುಖವಾಗಿದ್ದು, ಅವುಗಳನ್ನು ಸರಿಯಾದ ರೀತಿ ಮುದ್ರಿಸಿಕೊಂಡು ಕ್ರಮಬದ್ಧವಾಗಿ ಇರಿಸುವುದು.
4. ಪ್ರಾಧಿಕಾರದ ಚರ–ಸ್ಥಿರ ಆಸ್ತಿಗಳ ಬಗ್ಗೆ ಅಗತ್ಯ ಭದ್ರತೆ ವ್ಯವಸ್ಥೆ ಹಾಗೂ ಸೂಕ್ತ ವಹಿಯನ್ನು ನಿರ್ವಹಿಸುವುದು.
5. ಪ್ರಾಧಿಕಾರದಲ್ಲಿ ಹೆಚ್ಚು ಆರ್ಥಿಕ ವಹಿವಾಟುಗಳು ನಡೆಸುತ್ತಿದ್ದು, ಆರ್ಥಿಕವಾಗಿ ಸದೃಢತೆವಾಗಿರುವ ಇಂತಹ ಸಂಸ್ಥೆಗೆ ಒಬ್ಬ ಲೆಕ್ಕಾಧೀಕ್ಷಕರು, ಪ್ರಥಮ ದರ್ಜೆ ಸಹಾಯಕರು ಮತ್ತು ನಗದು ಸಹಾಯಕರುಗಳ ಅವಕಶ್ಯಕತೆ ಬಹಳ ಇದ್ದು ಆರ್ಥಿಕ ವ್ಯವಹಾರ ಹಾಗೂ ಲೆಕ್ಕಪತ್ರಗಳನ್ನು ಸಮರ್ಪಕವಾಗಿ ನಿರ್ವಹಿಸುವಲ್ಲಿ ಸಹಾಯಕವಾಗಿರುತ್ತದೆ.
6. ಕರ್ನಾಟಕ ನಗರ ಯೋಜನಾ ಪ್ರಾಧಿಕಾರಗಳ ಕಾಯ್ದೆಯ ಸೆಕ್ಷನ್ 18 ರಂತೆ ಪ್ರಾಧಿಕಾರವು ಭೂ ಪರಿವರ್ತನೆಗೊಂಡ ಪ್ರಕರಣಗಳಲ್ಲಿ ಬಡಾವಣೆ ನಕ್ಷೆಯನ್ನು ಅನುಮೋದಿಸುವಾಗ ಪರಿಷ್ಕೃತ ಹೆಚ್ಚುವರಿ ಭೂ ಮೌಲ್ಯದ 1/3 ಭಾಗ ಮೀರದಂತೆ ಉತ್ತಮತೆ ಶುಲ್ಕ ವಸೂಲಿ ಮಾಡಬೇಕೆಂಬ ನಿಬಂಧನೆ ಇದ್ದರೂ ಪ್ರಾಧಿಕಾರವು 1994 ರಲ್ಲಿ ನಿಗಧಿಪಡಿಸಿರುವ ದರಗಳಂತೆಯೇ ಉತ್ತಮತೆ ಶುಲ್ಕ ಸಂಗ್ರಹಿಸುತ್ತಿರುವುದರಿಂದ ಪ್ರಾಧಿಕಾರಕ್ಕೆ ಕೋಟ್ಯಂತರ ರೂಗಳಷ್ಟು ನಷ್ಟ ಉಂಟಾಗಿದೆ ಎಂದು ಲೆಕ್ಕ ತನಿಖೆಯಲ್ಲಿ ಅಭಿಪ್ರಾಯಪಡಲಾಗಿದೆ. ಸರ್ಕಾರವು ಆಗ್ಗಿಂದಾಗ್ಗೆ ಪರಿಷ್ಕರಣೆ ಮಾಡಿರುವ ಮಾರ್ಗಸೂಚಿ ಭೂ ಮೌಲ್ಯಗಳಂತೆ ಉತ್ತಮತೆ ಶುಲ್ಕದ ದರಗಳನ್ನು ಜರೂರಾಗಿ ಪರಿಷ್ಕರಣೆ ಮಾಡುವ ಕ್ರಮ ಅವಶ್ಯಕವಾಗಿದೆ.

ಮೇಲ್ಕಂಡ ಅಂಶಗಳ ಬಗ್ಗೆ ಪ್ರಾಧಿಕಾರದ ಆಡಳಿತ ವರ್ಗದಿಂದ ಸೂಕ್ತ ಕ್ರಮ ಅವಶ್ಯಕ ಎಂದು ಲೆಕ್ಕಪರಿಶೋಧನೆಯ ಅಭಿಪ್ರಾಯವಾಗಿದೆ.

Scanned with OKEN Scanner

ಅನುಬಂಧ–1 (ಕಂಡಿಕೆ–14)

ಚಿಕ್ಕಬಳ್ಳಾಪುರ ಜಿಲ್ಲೆಯ ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರದ 2018–19 ರ ಸಾಲಿನ

ವರ್ಗೀಕೃತ ಜಮಾ ಮತ್ತು ಖರ್ಚುಗಳ ವಿವರಣಾ ತಃಖ್ತೆ.

ಜಮಾ ವಿವರ	ಮೊಬಲಗು	ಖರ್ಚಿನ ವಿವರ	ಮೊಬಲಗು
ವಿನ್ಯಾಸ ಅಭಿವೃದ್ಧಿ / ಮೇಲ್ವಿಚಾರಣ	11893600	ಅಧಿಕಾರಿ ಸಿಬ್ಬಂದಿ ವೇತನ	1778632
ಕೆರೆಗಳ ಪುನಃಶ್ಚೇತನ ಶುಲ್ಕ	4183250	ಛೇರ್‌ಮನ್ ಗೌರವಧನ	68752
ಉತ್ತಮತೆ ಶುಲ್ಕ	1464250	ಛೇರ್‌ಮನ್ ವಾಹನ / ಡಿಸೆಲ್ ವೆಚ್ಚ	23355
		ಹೊರಗುತ್ತಿಗೆ ಸಿಬ್ಬಂದಿ	794515
ಪರಿಶೀಲನೆ / ಬಡಾವಣೆ ಶುಲ್ಕ / ವಿನ್ಯಾಸ ನಕ್ಷೆ ತಯಾರಿಸಿದ ಶುಲ್ಕ	2922450	ಕಛೇರಿ ಬಾಡಿಗೆ	157728
ಸಿ.ಎ. ನಿವೇಶನಗಳ ಬಾಬ್ತು ರಿಜಿಸ್ಟರ ಬಾಬ್ತು	8816150	ವಿದ್ಯುತ್ ಬಿಲ್ಲು	10339
ಕಟ್ಟಡ ನಕ್ಷೆ ಅನುಮೋದನೆ	1035000	ಅಂತರಜಾಲ ಬಿಲ್ಲು	9559
ಭದ್ರತಾ ಠೇವಣಿ	2972800	ಪೇಪರ್ ಪ್ರಕಟಣೆ ವೆಚ್ಚ	133428
ಸಿ.ಎ. ನಿವೇಶನ EMD	7299750	ಪಿಠೋಪಕರಣ/ ಎಲೆಕ್ಟ್ರಾನಿಕ್ಸ್ ಉಪಕರಣ	579231
ಟೆಂಡರ್ EMD / ಠೇವಣಿ ಮಾಹಿತಿ ಹಕ್ಕು ಶುಲ್ಕ	74368	ಲೇಖನಾ ಸಾಮಗ್ರಿ	17273
ದೃಢೀಕೃತ ಪ್ರತಿ / ಇತರೆ	10550	ಪಿ.ಡಬ್ಲ್ಯೂ.ಡಿ ಅಭಿಯಂತರ ಸಲಹಾ	1100
		ನಿಯತ ಕಾಲಿಕೆ ಪತ್ರಿಕೆ	1340
		ಗಣಕಯಂತ್ರ ವೆಚ್ಚ	19092
		ಕಛೇರಿ ಇತರೆ ವೆಚ್ಚ	92663
		ಉತ್ತಮತೆ ಶುಲ್ಕ	265896
		ಲೀಗಲ್ ವೆಚ್ಚ	6300
		ಸಿ.ಎ. ನಿವೇಶನ ಅಭಿವೃದ್ಧಿ	3819700
		EMD	18000
		ಮುಖ್ಯಮಂತ್ರಿ ರಿಲೀಪ್ ಫಂಡ್	12000
ಜಮೆಗಿಂತ ಖರ್ಚು ಹೆಚ್ಚಿರುವುದು	18394205	ವಾಹನಗಳ ಬಾಡಿಗೆ ಹೊರಗುತ್ತಿಗೆ	836220
		ಮಾಸ್ಟರ್ Plan	421250
		ಠೇವಣಿ ಇದ್ದದ್ದು	50000000
ಒಟ್ಟು ಜಮೆ	**59066373**	ಒಟ್ಟು ರೂ.	**59066373**

ಹಿರಿಯ ಉಪ ನಿರ್ದೇಶಕರು,
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ,
ಚಿಕ್ಕಬಳ್ಳಾಪುರ.

Scanned with OKEN Scanner

2018-19ನೇ ಸಾಲಿನ ಶುಲ್ಕ ವಸೂಲಿ ಮಾಡಿರುವ ವಿವರಗಳು

ಕ್ರ. ಸಂ	ಅರ್ಜಿದಾರರ ಹೆಸರು	ಸ.ನಂ	ಗ್ರಾಮ	ಒಟ್ಟು ವಿಸ್ತೀರ್ಣ	ರಸೀದಿ ಸಂಖ್ಯೆ	ದಿನಾಂಕ	ಪರಿಶೀಲನ ಶುಲ್ಕ	ಉತ್ತಮತೆ ಶುಲ್ಕ	ವಿನ್ಯಾಸ ನಕ್ಷೆ ತಯಾರಿಕಾ ಶುಲ್ಕ	ಮೇಲ್ವಿಚಾರಣಾ ಶುಲ್ಕ	ಪೆಟ್ಟುವರಿ ಪಾವತಿ	ಕರೆ ಪುನರ್ಪರಿತನ ಶುಲ್ಕ	ಒಟ್ಟು
1	ಮೆಗಾ ಪ್ರಜ್ಞಾ ಹೋಲ್ಡಿಂಗ್ಸ್ ಪರವಾಗಿ ಮಲ್ಲಾರೆಡ್ಡಿ ಬಾಡ ಬಿನ್ ವೆಂಕಟರೆಡ್ಡಿ.	23/2,3,4,6 ಮತ್ತು 24/2,4,3,6,8 ಹಾಗೂ 25/2,9	ವರಮಲ್ಲೇನಹಳ್ಳಿ	10-14	718	11/5/2018	41,900	167,600	5,300	1,035,000	–	1,035,000	2,284,800
2	ಶ್ರೀ ಪಿ.ಮುನಿರಾಜು ಬಿನ್ ಪಾಪಯ್ಯ.	182/8	ಗಂಗನಮಿದ್ದೆ	0-23	705	10/11/2018	2,350	–	–	57,500	50	–	59,900
3	ಶ್ರೀಮತಿ ಪ್ರೇಮ ಕೋಂ ಕೆ.ಬಿ.ಮಂಜುನಾಥ.	25/1ಎ2, 25/1ಎ3 ಹಾಗೂ ಇತರೆ	ಅಜ್ಜವಾರ	03-11.08	793	21/2/2019	13,400	–	–	–	100	–	13,500
4	ಶ್ರೀ ಎ.ವಿ.ಲಕ್ಷ್ಮೀಪತಿ ಬಿನ್ ವೆಂಕಟರಾಯಪ್ಪ.	161/1	ವಾಪಸಂದ್ರ	0-39	707	10/11/2018	3,800	–	–	–	–	–	3,800
5	ಮೆಗಾ ಪ್ರಜ್ಞಾ ಡೆವಲಪರ್ಸ್ ರವರ ಪರವಾಗಿ ಶ್ರೀ ವೇಣುಗೋಪಾಲ್ ಜೇಡಿಗುಂಟ.	80/1, 79/2, 80/2	ತಾಂಡ್ರಮಾರದಹಳ್ಳಿ	0-38	661	13/6/2018	20,100	–	–	–	–	–	20,100
6	ಮೆಗಾ ವಿ.ಆರ್.ಹೋಲ್ಡಿಂಗ್ಸ್ ಪ್ರೈವೇಟ್ ಲಿಮಿಟೆಡ್ ಪರವಾಗಿ ಶ್ರೀ ಚಂದ್ರಶೇಖರ್.	49/2	ಮಾವಹಳ್ಳಿ	02-00	619	24/4/2018	–	–	–	191,600	–	–	191,600
7	ಶ್ರೀ ಎಸ್.ಜಯದೇವ ಬಿನ್ ಶಿವರಾಮರೆಡ್ಡಿ ಮತ್ತು ಶ್ರೀ ಟಿ.ಜಗದೀಶ ಬಿನ್ ತಾತಪ್ಪರೆಡ್ಡಿ.	2/3	ಅಂಕಣಗೊಂದಿ	0-23	706	10/11/2018	4,900	19,500	600	120,000	–	120,000	265,000
8	ಮೆಗಾ ಶ್ರೀ ಶ್ರೀನಿವಾಸ ಡೆವಲಪರ್ಸ್ ಪರವಾಗಿ ಪಾಲುದಾರರಾದ ಶ್ರೀ ಗುಟ್ಟ ತಿರುಪತಿಬಾಬು ನಾಯ್ಡು ಮತ್ತು ಶ್ರೀ ಆರ್.ರಾಮಾಂಜಿನಿ.	141/3	ಅಗಲಗುರ್ಕಿ	03-14	749	1/7/2018	27,200	–	–	–	–	–	27,200
9	ಶ್ರೀಮತಿ ಎಲ್ಲಮ್ಮ ಕೋಂ ಲೇ॥ ಶ್ರೀರಾಮಯ್ಯ	180/2, 180/3	ಗಂಗನಮಿದ್ದೆ	01-03.08	711	10/17/2018	4,400	–	–	–	–	–	4,400
10	ಶ್ರೀ ಕೃಷ್ಣಪ್ಪ ಬಿನ್ ನಾಗಪ್ಪ.	32/3	ಅಂಕಣಗೊಂದಿ	0-38.04	758	31/1/2019	3,900	15,500	500	97,000	–	97,000	213,900
11	ಶ್ರೀ ವಿ.ಕೆ.ನಾಯರ್ ಬಿನ್ ಲೇ॥ ರಾಮಪ್ಪ.	1, 93/1A.92/2.9	ಚದುಲಪುರ	08-22	730	15/12/2018	34,700	138,500	4,400	855,000	–	855,000	1,887,600
12	ಶ್ರೀ ಆರ್.ವೆಂಕಟೇಗೌಡ ಬಿನ್ ರಾಮಪ್ಪ.	44/2, 44/3	ಮರಸನಹಳ್ಳಿ	01-24	670	7/9/2018	6,500	77,700	900	160,000	–	160,000	405,100
13	ಶ್ರೀ ಚಿಕ್ಕ ತಿಮ್ಮಯ್ಯ.	54/1	ಮಾವಹಳ್ಳಿ	0-39.08	615	13/4/2018	2,000	4,000	–	74,100	–		80,100
14	ಶ್ರೀ ಮಹೇಶ್ ಕುಮಾರ್.	101/22	ಅಮಾನಿ ಕಂದವಾರ ಕೆರೆ	0-01.08	712	17/10/2018	200	1,900	100	3,750	–	3,750	9,700
15	ಶ್ರೀ ಎನ್.ಗೋವಿಂದರಾಜ್.	105/2	ಕವರನಹಳ್ಳಿ	03-38	819	3/8/2019	16,000	64,000	2,000	395,000	–	395,000	872,000
16	ಶ್ರೀ ರಾಜೇಂದ್ರ ಗುಪ್ತ.	16/2, 20/1, 20/2, 20/3	ಹೂನೇಗಲ್ಲು	05-36	618	19/4/2018	–	23,900	–	442,500	–	–	466,400
17	ಶ್ರೀ ಅಮರನಾಥ ಹೆಗ್ಗಡೆ.	93	ಕಣಚೇನಹಳ್ಳಿ	03-22	609	4/9/2018	14,400	57,500	1,800	355,000	–	355,000	783,700
18	ಶ್ರೀಮತಿ ಲಲಿತವಾಣಿ.	252	ಅಗಲಗುರ್ಕಿ	01-10	533	27/2/2018	–	5,100	–	94,000	–	–	99,100
19					610	4/9/2018	5,100	–	–	–	–	–	5,100
20	ಬಿಜೇತ ವೆಂಚರ್ಸ್ ಪರವಾಗಿ ಶ್ರೀ.ಕೆ.ಆದಿಶೇಷರೆಡ್ಡಿ.	25/2	ಬನ್ನಿಕುಪ್ಪೆ	02-27	647	24/5/2018	10,900	10,900	–	200,700	300	–	222,800
21	ಶ್ರೀ ಪಿ.ಎಸ್.ಗೋಪಾಲಕೃಷ್ಣ.	38/1, 38/2, 218	ಅಣಕನೂರು	06-19	828	14/3/2019	26,300	–	–	673,800	–	–	700,100
22	ಮೆಗಾ ಪಿ.ಎನ್.ಎಸ್.ವೆಂಚರ್ಸ್ ಮತ್ತು ಪಾಲುದಾರರು.	48/2	ಶ್ರೀರಾಮಪುರ	0-30	612	4/10/2018	3,100	3,100	400	56,300	–	–	62,900
							241,150	589,200	16,000	4,811,250	450	3,020,750	8,678,800

ಹಿರಿಯ ಉಪನಿರ್ದೇಶಕರು,
ಸ್ಥಳೀಯ ನಿಕ್ಷೇಪಮೌಲ್ಯಾಂಕನ ವಲಯ,
ಚಿಕ್ಕಬಳ್ಳಾಪುರ.

Scanned with OKEN Scanner

೨೦೧೮-೧೯ರ ಸಾಲಿನ ಕಡತಗಳಲ್ಲಿ ಉತ್ತಮತೆ ಶುಲ್ಕ ಕಡಿಮೆ ವಸೂಲಿ ಮಾಡಿರುವ ವಿವರ

No.	Name of the Village /Area	Survey No's	Cost of Land/ Acre (As Per Guidance Value)	Developemnt Cost per Acre	Total Cost per Acre (4+5)	Price per Sq. Mtr (As per Guidance Value)	Total Land in Sq. Mtr	Saleable Land in Sq. Mtr. (8*55%)	Sale Price (7*9)	Profit (10-6)	Increase in Market Value Per Sq. Mtr (11/9)	1/3 of the increase in Market Value/Sq. Mtr (12=1/3)	Betterment Fee Collected per Sq. Mtr	Loss due to non implementation of provisions of Section 18 of KUDA Act per Sq. Mtr	Total Loss (9*15)
1	2	3	4	5	6	7	8	9	10	11	12	13	14	15	16
1	ಕಣಜೇನ ಹಳ್ಳಿ	93	1000000	2025000	3025000	4300	14366.14	7,901.38	33,975,921.10	30,950,921.10	3,917.16	1,305.72	3	1302.72	10,293,269.57
2	ಅಗಲ ಗುರ್ಕಿ	252	1333000	2025000	3358000	3800	5058.5	2,782.18	10,572,265.00	7,214,265.00	2,593.03	864.34	3	861.34	2,396,408.48
3	ಶ್ರೀರಾಮ ಪುರ	48/2	1042000	2025000	3067000	2400	3035.1	1,669.31	4,006,332.00	939,332.00	562.71	187.57	3	184.57	308,102.75
4	ಮಾವಹಳ್ಳಿ	54/1	1500000	2025000	3525000	3000	3945	2,169.75	6,509,250.00	2,984,250.00	1,375.39	458.46	3	455.46	988,240.75
5	ಹೊನೇ ಗಲ್ಲು	16/2, 20/1, 20/2, 20/3	1500000	2025000	3525000	1800	23876.12	13,131.87	23,637,358.80	20,112,358.80	1,531.57	510.52	3	507.52	6,664,724.00
6	ಮಾವಹಳ್ಳಿ	49/2	1500000	2025000	3525000	3000	4046.8	2,225.74	6,677,220.00	3,152,220.00	1,416.26	472.09	3	469.09	1,044,062.78
7	ಬನ್ನಿಕುಪ್ಪೆ	25/2	100000	2025000	2125000	2200	10825.19	5,953.85	13,098,479.90	10,973,479.90	1,843.09	614.36	3	611.36	3,639,965.07
8	ತಾಂಡ್ರಮರದಹಳ್ಳಿ	80/1, 79/2, 80/2	1500000	2025000	3525000	2500	20031.66	11,017.41	27,543,532.50	24,018,532.50	2,180.05	726.68	3	723.68	7,973,125.26
9	ಮರಸ ಸಂಹಳ್ಳಿ	44/2, 44/3	6050000	2025000	8075000	3600	6474.88	3,561.18	12,820,262.40	4,745,262.40	1,332.50	444.17	3	441.17	1,571,070.58
10	ಅಂಕಣ ಗೊಂದಿ		2000000	2025000	4025000	4200	2326.71	1,279.69	5,374,700.10	1,349,700.10	1,054.71	351.57	3	348.57	446,060.96
11	ವಾಪಸಂದ್ರ	161/1	4400000	2025000	6425000	5200	3745.63	2,060.10	10,712,501.80	4,287,501.80	2,081.21	693.74	3	690.74	1,422,986.98
12	ಗಂಗನ ಮಿದ್ದೆ	180/2, 180/3	5500000	2025000	7525000	5000	4350.31	2,392.67	11,963,352.50	4,438,352.50	1,854.98	618.33	3	615.33	1,472,272.82
13	ಅಮಾನಿ ಕಂದವಾರ ಕೆರೆ	101/22	1434000	2025000	3459000	3800	4046.3	2,225.47	8,456,767.00	4,997,767.00	2,245.72	748.57	3	745.57	1,659,245.94
14	ವರಮಲ್ಲೇ ನಹಳ್ಳಿ	23/2,3,4,6 & 24/2,4,3,6,8 & 25/2,9	2500000	2025000	4525000	4100	41884.38	23,036.41	94,449,276.90	89,924,276.90	3,903.57	1,301.19	3	1298.19	29,905,649.74
15	ಚದಲಪುರ	92/1, 93/10, 92/2, 91/1	1734000	2025000	3759000	5400	34600.14	19,030.08	102,762,415.80	99,003,415.80	5,202.47	1,734.16	3	1731.16	32,944,048.37
16	ಅಗಲ ಗುರ್ಕಿ	141/3	1333000	2025000	3358000	3400	13556.78	7,456.23	25,351,178.60	21,993,178.60	2,949.64	983.21	3	980.21	7,308,690.85
17	ಅಂಕಣ ಗೊಂದಿ	32/3	2200000	2025000	4225000	4800	3844.46	2,114.45	10,149,374.40	5,924,374.40	2,801.85	933.95	3	930.95	1,968,448.11
18	ಅಜ್ಜವಾರ	25/1ಎ, 25/1ಎ 3 & ಇತರೆ	1043000	2025000	3068000	1400	13253.27	7,289.30	10,205,017.90	7,137,017.90	979.11	326.37	3	323.37	2,357,138.07
	Total				74119000				418,265,206.70	344146206.7					114,363,511.07

ಹಿರಿಯ ಉಪ ನಿರ್ದೇಶಕರು
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ
ಚಿಕ್ಕಬಳ್ಳಾಪುರ.

Scanned with OKEN Scanner